ಮುಜುಗರವನ್ನು ಉಂಟುಮಾಡದೆ ಕಾಟನ್ ಸೀರೆಗಳು ಸಾಥ್ ನೀಡುತ್ತವೆ. ದೂರದ ಪ್ರಯಾಣವೇ ಇರಲಿ, ದಿನವಿಡಿಯ ಸಭೆ, ಸಮಾರಂಭದಂಥ ಕಾರ್ಯಕ್ರಮಗಳಿರಲಿ ಕಂಫರ್ಟ್‌ನೊಂದಿಗೆ ವೃತ್ತಿಪರ ಲುಕ್ ನೀಡುತ್ತವೆ. ಅಷ್ಟೇ ಅಲ್ಲ, ಇವು ಎಲ್ಲಾ ರೀತಿಯ ಮೈಕಟ್ಟಿನವರಿಗೆ ಚೆನ್ನಾಗಿ ಒಪ್ಪುತ್ತವೆ ಎನ್ನುವುದು ಇದರ ಪ್ಲಸ್ ಪಾಯಿಂಟ್.

## ಯುವಪೀಳಿಗೆಯವರ ಕ್ರೇಜ್

ಈಗಿನ ಜೆನ್ ಜಿ ಹುಡುಗಿಯರೂ ಕಾಟನ್ ಸೀರೆಗಳನ್ನು ಬಹುವಾಗಿ ಇಷ್ಟಪಡುತ್ತಿದ್ದಾರೆ. ಬೆಂಗಳೂರಿನ ಖಾಸಗಿ ಕಂಪೆನಿಯೊಂದರಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸುತ್ತಿರುವ ದುರ್ಗಾ ಹೆಗಡೆ ಪ್ರಕಾರ, ‘ಕಾಟನ್ ಸೀರೆಗಳು ಹಳೆಯ ಫ್ಯಾಷನ್ ಅಲ್ಲವೇ ಅಲ್ಲ. ಹೆಚ್ಚು ಕಷ್ಟಪಡದೆ, ಅಲಂಕಾರದ ಗೊಡವೆಯಿಲ್ಲದೆ ಕ್ಲಾಸಿಕ್ ಲುಕ್ ನೀಡಬಲ್ಲ ಸೀರೆ ಅಂದರೆ ಅದು ಕಾಟನ್ ಸೀರೆ. ನಮ್ಮ ಪೀಳಿಗೆಯವರಿಗೆ ಕಂಫರ್ಟ್ ಮೊದಲ ಆದ್ಯತೆ.


ದುರ್ಗಾ ಹೆಗಡೆ



ಹಗುರವಾದ ಈ ಸೀರೆಗಳು ನಮ್ಮ ಆದ್ಯತೆಗಳಿಗೆ ಹೇಳಿ ಮಾಡಿಸಿದಂತಿವೆ. ಕಾಲೇಜು, ಕಚೇರಿ ಕಾರ್ಯಕ್ರಮಗಳಿರಲಿ, ಹಬ್ಬಹರಿದಿನಗಳಿರಲಿ ಕ್ರಾಪ್‌ಟಾಪ್ ಅಥವಾ ಕ್ರೋಸೆಟ್ ಬ್ಲೌಸ್‌ನೊಂದಿಗೆ ಫ್ಯೂಷನ್ ಮಾಡಿದರೆ ಒಳ್ಳೆಯ ಲುಕ್ ಸಿಗುತ್ತದೆ. ನಮ್ಮ ನಮ್ಮ ಅಭಿರುಚಿಗೆ ತಕ್ಕಂತೆ ಕಸ್ಟಮೈಸ್ ಕೂಡ ಮಾಡಿಕೊಳ್ಳಬಹುದಾದ ಇದು ಎಂದಿಗೂ ಔಟ್‌ಡೇಟ್ ಆಗುವುದೇ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಪರಿಸರಸ್ನೇಹಿ ಹಾಗೂ ನಮ್ಮ ಬೇರುಗಳಿಗೆ ಹತ್ತಿರವಾಗಿದೆ.

## ಆಯ್ಕೆ ಹಾಗೂ ನಿರ್ವಹಣೆ

ಮಾರುಕಟ್ಟೆಯಲ್ಲಿ ಅತ್ಯಂತ ಸರಳ ಲುಕ್ ನೀಡುವ ಸೀರೆಗಳ ಜೊತೆಗೆ ಶ್ರೀಮಂತ ಲುಕ್ ಕೊಡುವ ಕಾಟನ್ ಸೀರೆಗಳೂ ಲಭ್ಯವಿವೆ. ಹಬ್ಬ ಹರಿದಿನಗಳಂಥ ಸಾಂಪ್ರದಾಯಿಕ ಕಾರ್ಯಕ್ರಮಕ್ಕೆ ಸೀರೆ ಆಯ್ದುಕೊಳ್ಳುವಾಗ ಅಂದಕ್ಕೆ, ಗಾಢ ಬಣ್ಣಕ್ಕೆ ಹೆಚ್ಚು ಪ್ರಾಶಸ್ತ್ಯವಿರಲಿ. ಅದೇ ನಿತ್ಯದ ಬಳಕೆಗೆ ಎಂದಾದರೆ ತಿಳಿ ಬಣ್ಣದ ಸೀರೆಗಳು ಹೆಚ್ಚು ಸೂಕ್ತ. ಈಗಿನ ಟ್ರೆಂಡ್‌ಗೆ ಹೊಂದುವಂತೆ ಪಾಸ್ಟೆಲ್ ಬಣ್ಣಗಳಿಗೆ ಅಂದರೆ ಬಿಳಿ, ತಿಳಿ ಹಳದಿ, ತಿಳಿ ನೀಲಿ, ತಿಳಿ ಹಸಿರು ಆಯ್ದುಕೊಳ್ಳಿ. ಜೊತೆಗೆ ಸಣ್ಣ ಸಣ್ಣ ಪ್ರಿಂಟ್ ಇರುವ ಅಥವಾ ಸರಳವಾದ ಎಂಬ್ರಾಯ್ಡರಿ ಇದ್ದರೇ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ದಿನವಿಡೀ ತೊಡಲು ಆರಾಮದಾಯಕವಾದ, ಮೃದುವಾದ ಕಾಟನ್ ನಿಮ್ಮ ಆಯ್ಕೆ ಆಗಿರಲಿ.

ಕೈಮಗ್ಗ ಸೀರೆ, ಬ್ರಾಂಡೆಡ್ ಕಾಟನ್ ಸೀರೆಗಳು ತಮ್ಮ ವಿಶಿಷ್ಟ ವಿನ್ಯಾಸದಿಂದ ದೀರ್ಘಕಾಲ ಬಾಳಿಕೆ ಬರುತ್ತವೆ. ದಶಕಗಳೇ ಕಳೆದರೂ ಅದರ ಹೊಳಪು ಮಾಸುವುದಿಲ್ಲ. ಪ್ರತಿ ಬಾರಿ ತೊಳೆದ ನಂತರವೂ ಇಸ್ತ್ರಿ ಬೇಕೇಬೇಕು ಅನ್ನುವುದನ್ನು ಬಿಟ್ಟರೆ ಕಾಟನ್ ಸೀರೆಗಳ ನಿರ್ವಹಣೆ ಸುಲಭ. ಇದು ಹೆಚ್ಚು ಪರಿಸರಸ್ನೇಹಿ. ಲೆನಿನ್, ಸಿಂಥೆಟಿಕ್ ಸೀರೆಗಳಿಗೆ ಹೋಲಿಸಿದರೆ ಕಾಟನ್ ಸೀರೆಗಳಿಗೆ ಬೇಗ ಬೆಂಕಿ ಹೊತ್ತಿಕೊಳ್ಳುವುದಿಲ್ಲ. ನಿರ್ವಹಣೆಯೂ ಸುಲಭ. ಹೀಗಾಗಿ, ದಿನನಿತ್ಯದ ಬಳಕೆಗೆ ಹೆಚ್ಚಿನ ಗೃಹಿಣಿಯರ ಆಯ್ಕೆ ಇದೇ.

## ಆಕ್ಸೆಸರೀಸ್

ನೀವು ಧರಿಸುವ ಆಕ್ಸೆಸರೀಸ್‌ಗಳು ಮಿತವಾಗಿರಲಿ. ಆಕ್ಸಿಡೈಸ್ಡ್ ಕಿವಿಯೋಲೆ, ಆಭರಣಗಳು ಹೆಚ್ಚು ಹೊಂದುತ್ತವೆ. ಡಿಸೈನರ್ ಬ್ಲೌಸ್‌ಗಳ ಬದಲು ಸರಳ ವಿನ್ಯಾಸದ ರವಿಕೆ ಚೆನ್ನಾಗಿ ಕಾಣುತ್ತದೆ. ಸ್ಲೀವ್‌ಲೆಸ್ ಬ್ಲೌಸ್ ಅಥವಾ ಶಾರ್ಟ್ ಸ್ಲೀವ್ ಬ್ಲೌಸ್ ಹೆಚ್ಚು ಸೂಕ್ತ.

## ಈಗಿನ ಟ್ರೆಂಡ್ ಇದೇ

ಈಗಿನ ಪೀಳಿಗೆಯವರಿಗೆ ಇಷ್ಟವಾಗೋದೇ ಕಾಟನ್ ಸೀರೆಗಳು. ಹೆವಿ ಸೀರೆಗಳಿಗಿಂತ ಇದು ಉಡೋಕೆ ತುಂಬಾ ಸುಲಭ. ಹಗುರವಾಗಿರತ್ತೆ. ಈಸಿ ಟು ಕ್ಯಾರಿ. ತುಂಬಾ ಟ್ರೆಂಡಿ ಆಗಿ ಉಡಬಹುದು. ಬ್ಲೇಜರ್ ಜೊತೆ ಹಾಕ್ತೀರೊ, ಬೇರೆ ಬೇರೆ ಥರದ ಬ್ಲೌಸ್‌ಗಳ ಜೊತೆ ಹಾಕ್ತೀರೊ ಹೇಗೆ ಮ್ಯಾಚ್ ಮಾಡ್ಕೊಂಡ್ರೂ ಕಾಟನ್ ಸೀರೆಗಳು ಕ್ಲಾಸಿ ಲುಕ್ ಕೊಡುತ್ತವೆ. ಸದ್ಯಕ್ಕೆ ಮಲ್ ಮಲ್ ಕಾಟನ್ ತುಂಬಾ ಟ್ರೆಂಡ್‌ನಲ್ಲಿದೆ. ತುಂಬಾ ಹಗುರ, ವಿಭಿನ್ನ ವಿನ್ಯಾಸ, ಚೆಂದದ ಬಣ್ಣಗಳಲ್ಲಿ ಈ ಸೀರೆ ಲಭ್ಯ ಇರೋದ್ರಿಂದ ಹೆಚ್ಚು ಬೇಡಿಕೆ ಇದೆ. ಕ್ಯಾಶುವಲ್ ಹಾಗೂ ಆಫೀಷಿಯಲ್ ವೇರ್ ಆಗಿಯೂ ಈ ಸೀರೆ ಜನಪ್ರಿಯತೆ ಗಳಿಸಿದೆ. ಕಂದು, ಹಳದಿ, ಬಿಳಿ ಮಿಶ್ರಿತ ಛಾಯೆಯ ಬೇಜ್ ಬಣ್ಣ ಹಾಗೂ ಗಾಢ ಬಣ್ಣಕ್ಕೆ ಹೆಚ್ಚು ಆದ್ಯತೆ ಇದೆ.



**ಅರ್ಚನಾ ಸುಂದರ್,**
ಸೆಲೆಬ್ರಿಟಿ ಸ್ಟೈಲಿಸ್ಟ್

## ವೃತ್ತಿಪರರಿಗೂ ಅಚ್ಚುಮೆಚ್ಚು

ಭಾರತೀಯರ ಪಾಲಿಗೆ ಇದು ಕೇವಲ ಉಡುಪಲ್ಲ, ಸೊಬಗು, ಸಂಪ್ರದಾಯ, ಸಂಸ್ಕೃತಿ, ಆತ್ಮವಿಶ್ವಾಸ, ರಾಜಕೀಯ ಹಾಗೂ ಸಾಮಾಜಿಕ ಅಸ್ಮಿತೆಯ ಪ್ರತೀಕ. ರಾಜಕೀಯದಲ್ಲಿ ಸಕ್ರಿಯರಾಗಿರುವ ಅನೇಕರನ್ನು ನೋಡಿ, ಅವರು ಹೆಚ್ಚಾಗಿ ಧರಿಸುವುದು ಕಾಟನ್ ಸೀರೆಯನ್ನೇ. ಇಂದಿರಾಗಾಂಧಿ ಅವರಿಂದ ಹಿಡಿದು ಸೋನಿಯಾಗಾಂಧಿ, ಮಮತಾ ಬ್ಯಾನರ್ಜಿ, ಸುಷ್ಮಾ ಸ್ವರಾಜ್, ನಿರ್ಮಲಾ ಸೀತಾರಾಮನ್ ಆದಿಯಾಗಿ ಎಲ್ಲರೂ ಕಾಟನ್ ಸೀರೆಯನ್ನೇ ಹೆಚ್ಚಾಗಿ ಧರಿಸುತ್ತಾರೆ. ಸಿನಿಮಾ ತಾರೆಗಳು ಕೂಡ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಾಗ ಕಾಟನ್ ದಿರಿಸನ್ನೇ ತೊಡುತ್ತಾರೆ.

ದೀಪಿಕಾ ಪಡುಕೋಣೆ, ಕಂಗನಾ ರಣಾವತ್, ವಿದ್ಯಾ ಬಾಲನ್, ರಮ್ಯಾ, ರಚಿತಾ ರಾಮ್ ಮುಂತಾದವರು ಆಗಾಗ ಕಾಟನ್ ಸೀರೆಗಳಲ್ಲಿಯೇ ಕಾಣಿಸಿಕೊಳ್ಳುತ್ತಾರೆ. ಜೀ ವಾಹಿನಿಯಲ್ಲಿ ಬರುವ ಅಮೃತಧಾರೆ ಧಾರಾವಾಹಿಯಲ್ಲಿ ಭೂಮಿಕಾ ಪಾತ್ರಧಾರಿ ಶಿಕ್ಷಕಿಯಾದಾಗ ತೊಟ್ಟಿದ್ದೂ ಕಾಟನ್ ಸೀರೆಗಳನ್ನೇ.